ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಕರ್ನಾಟಕ ವಿಧಾನ ಸಭೆ

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡ ಪ್ರಭ    ದಿನಾಂಕ : DATE : 5/7/19

# ಶಾಸಕರ ಭವನ ಬಿಜೆಪಿಗರ ಡೀಲ್ ತಾಣ: ಮಹದೇವ

ಪಿರಿಯಾಪಟ್ಟಣ: ಬಿಜೆಪಿಯವರು ನನಗೂ 30ರಿಂದ 40 ಕೋಟಿ ರು. ಹಣ ನೀಡಲು ಬಂದಿದ್ದರು ಎಂದು ಈಗಾಗಲೇ ಆರೋಪಿಸಿರುವ ಪಿರಿಯಾಪಟ್ಟಣ ಶಾಸಕ ಕೆ. ಮಹದೇವ್ ಇದೀಗ ಶಾಸಕರ ಭವನವೇ ಬಿಜೆಪಿಗರು ಆಪರೇಶನ್ ಕಮಲ ನಡೆಸುವ ಸ್ಥಳ ಎಂದು ಮತ್ತೊಂದು ಬಾಂಬ್ ಸಿಡಿಸಿದ್ದಾರೆ.



ಪಟ್ಟಣದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯವರು ನನಗೆ ಶಾಸಕರ ಭವನದಲ್ಲೇ ಹಣದ ಆಫರ್ ನೀಡಿದ್ದರು ಎಂದಿದ್ದಾರೆ. ಈ ಮೂಲಕ ರಾಜಕೀಯ ವಲಯದಲ್ಲಿ ಮತ್ತೆ ಸಂಚಲನ ಮೂಡುವಂತೆ ಮಾಡಿದ್ದಾರೆ. ಬಿಜೆಪಿ ಆಪರೇಷನ್ ಕಮಲ ಬೆಳವಣಿಗೆಗಳು ಶಾಸಕರ ಭವನದಲ್ಲೇ ನಡೆಯುತ್ತಿತ್ತು ಹಾಗೂ ಡೀಲ್ ನಡೆಸಲು ಬಂದವರು ಹಣದ ಸಮೇತ ಬಂದಿದ್ದರು ಎಂದು ಹೇಳಿದ್ದಾರೆ.